ಶ್ರೀ ಎಂ. ರಾಜಶೇಖರ ಮೂರ್ತಿ : ಅವರು ಹೇಳಿದರು ಸಬ್ ರಿಜಿಸ್ಟರ್ ಆಫೀಸಿನಲ್ಲಿ ಯಾವ ರೇಟು ನಿಗದಿ ಆಗಿದೆ ಅದನ್ನು ತೆಗೆದುಕೊಂಡರೆ ಇವರಿಗೆ ಬಹಳ ನಷ್ಟವಾಗುತ್ತದೆ ಏಕೆಂದರೆ ಸಬ್ ರಿಜಿಸ್ಟರ್ ಆಫೀಸಿನಲ್ಲಿ ಅಂಡರ್ ವ್ಯಾಲುವೇಶನ್ ಆಗಿರುವುದರಿಂದ ಅದೇ ರೀತಿಯಲ್ಲಿ ಅಪ್ಲೈ ಮಾಡಬೇಕು ಎಂದರೆ ತೊಂದರೆ ಆಗುತ್ತದೆ ಎಂದು ಹೇಳುವುದನ್ನು ಒಪ್ಪಬಹುದು. ಈಗ ಅಲ್ಲಿರತಕ್ಕಂಥ ರೈತರು ತಾವೇ ಮುಂದಾಗಿ ಬಂದಿದ್ದಾರೆ ನಾವು ಕೊಡುತ್ತೇವೆ ಎಂದು. ನೆಗೋಷಿಯೇಷನ್ ಮಾಡುತ್ತೇವೆ . ನೆಗೋಷಿಯೇಟ್ ಮಾಡುವಂಥ ಕಾಲದಲ್ಲಿ ಸ್ವಲ್ಪ ಏನು ಬೆಲೆ ಇದೆ ಅದಕ್ಕಿಂತ ಉತ್ತಮವಾದ ಬೆಲೆ ಕೊಡುತ್ತೇವೆ.

ಹೊಳೇನರಸೀಪುರ ತಾಲ್ಲೂಕಿನಲ್ಲಿ ತಾಳೆಎಣ್ಣೆ ಅಭಿವೃದ್ಧಿ ಯೋಜನೆ

180 - ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೇನರಸೀಪುರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಳೇನರಸೀಪುರ ತಾಲ್ಲೂಕಿನ ಗುಂಬೇವು ಗ್ರಾಮದ ಶ್ರೀ ಮಠಕಾವತ ಜಮೀನಿನಲ್ಲಿ ತಾಳೆ ಎಣ್ಣೆ ಅಭಿವೃದ್ಧಿ ಯೋಜನೆಯನ್ನು ಪ್ರಾರಂಭಿಸಲು ಉದ್ದೇಶಿಸಲಾಗಿತ್ತೇ?

ಆ) ಹಾಗಿದ್ದಲ್ಲಿ ಸದರಿ ಯೋಜನೆಯನ್ನು ಪ್ರಾರಂಭಿಸದಿರಲು ಕಾರಣವೇನು?

ಇ) ತಾಳೆ ಎಣ್ಣೆ ಅಭಿವೃದ್ಧಿ ಯೋಜನೆಯನ್ನು ಸರ್ಕಾರವು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು) :

ಅ) ಹೌದು

ಆ) ತಾಳೆ ಎಣ್ಣೆ ಸಸ್ಯಗಾರದ ಪೂರ್ವಬಾವಿ ಕೆಲಸಗಳನ್ನು ಪ್ರಾರಂಭಿಸಲಾಗಿದೆ.

ಇ) ಈ ಪ್ರದೇಶದಲ್ಲಿ ತಾಳೆ ಸಸ್ಯಗಾರಕ್ಕಾಗಿ ಬೇಕಾದ ದಾಸ್ತಾನು ಮಳಿಗೆ ಮತ್ತು ಕಾವಲು ವ್ಯವಸ್ಥೆಗಾಗಿ ಕಟ್ಟಡ ಕಟ್ಟಲು ಪ್ರಾರಂಭಿಸಲಾಗಿದೆ. ಬೇಲಿ ಮತ್ತು ನೀರಾವರಿ ವ್ಯವಸ್ಥೆ ಮಾಡಲಾಗುತ್ತಿದೆ. ಮೊಳಿತ ತಾಳೆ ಬೀಜಗಳು ಹೊರದೇಶದಿಂದ ಜನವರಿ 93ರ ಅಂತ್ಯಕ್ಕೆ ಬರಲಿದ್ದು, ಈ ಬೀಜಗಳನ್ನು ನಾಟಿಮಾಡಿ, ತಾಳೆ ಸಸಿಗಳನ್ನು ಅಕ್ಟೋಬರ್ ನವೆಂಬರ್ 93ರ ಹೊತ್ತಿಗೆ ರೈತರಿಗೆ ವಿತರಿಸಲಾಗುವುದು.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಉಪಾಧ್ಯಕ್ಷಣಿಯವರೇ ಈಗ 93ರ ಹೊತ್ತಿಗೆ ತಾಳೆ ಸಸಿಗಳನ್ನು ರೈತರಿಗೆ ಹಂಚುತ್ತೇವೆ ಎಂದು ಹೇಳಿ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಈ ಯೋಜನೆಗೆ ತಗಲತಕ್ಕ ವೆಚ್ಚ ಎಷ್ಟು? ಈ ವರ್ಷದಲ್ಲಿ ಎಷ್ಟು ಹಣ ವೆಚ್ಚ ಮಾಡಲಿದ್ದೀರಿ. ಪೂರಾ ಹಣ ಖರ್ಚಾಗಲಿಕ್ಕೆ ಎಷ್ಟು ದಿನ ಬೇಕಾಗುತ್ತದೆ. ಈ ಸಂದರ್ಭದಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆಯೇ? ತಾವು ರೈತರಿಗೆ ಕೊಡತಕ್ಕಂಥ ಆ ಇನ್ಸೆಂಟೀವ್ ಸಹಾಯಧನ ಎಷ್ಟು ದಯಮಾಡಿ ತಿಳಿಸುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ : ಮಾನ್ಯ ಅಧ್ಯಕ್ಷರೇ, ಈ ಉಪ ಪ್ರಶ್ನೆ ವಿಷಯದಲ್ಲಿ ಸರ್ಕಾರ ಇಲ್ಲಿಯವರೆಗೆ ಆಲೋಚನೆ ಮಾಡಿಲ್ಲ ಎಂದು ಹೇಳಿಬೇಕಾಗುತ್ತದೆ. ಏಕೆಂದರೆ ಆ ಮೊಳಕೆ ಬೀಜಗಳು ಹೊರ ದೇಶದಿಂದ ಬರಬೇಕು ಎಂಬುದು ಪ್ರಶ್ನೆ ಹಾಕಿದಂಥ ಸ್ನೇಹಿತರಿಗೆ ಗೊತ್ತಿದೆ, ಆದರೆ ಈಗ ಬೊಂಬಾಯಿಗೆ ಮೊಳಕೆ

ಬೀಜಗಳು ಬಂದಿವೆ ಎಂದು ನನಗೆ ಇವತ್ತು ತಾನೇ ವರ್ತಮಾನ ಬಂದಿದೆ. ಬೀಜ ಉಪಯೋಗಿಸಿಕೊಂಡು ಮುಂದಿನ ಕ್ರಮ ತೆಗೆದುಕೊಳ್ಳುವುದು. ಮತ್ತು ಇನ್ನು ಬೇರೆ ಬೀಜಗಳು ಪರದೇಶದಿಂದ ಬರುವುದಿದೆ. ಅದನ್ನು ಉಪಯೋಗಿಸಿ ಆಮೇಲೆ ಏನೇನು ಕಾರ್ಯಕ್ರಮ ತೆಗದುಕೊಳ್ಳಬೇಕು ಅದನ್ನೆಲ್ಲಾ ಸರ್ಕಾರ ತೀರ್ಮಾನ ಮಾಡುತ್ತದೆ. ಈಗ ಬಂದ ಮೊಳಕೆ ಬೀಜವನ್ನು ಎಲ್ಲಿಗೆ ಕಳುಹಿಸಿಬೇಕು. ಯಾವ ರೀತಿ ಮಾಡಬೇಕೆಂಬ ಆಲೋಚನೆ ನಡೆದಿದೆ. ಇದು ತೀರ ಹೆಚ್ಚು ಸಮರ್ಪಕವಾಗಿ ಈಗಾಗಲೇ....

ಉಪಾಧ್ಯಕ್ಷಣಿಯವರು : ಮಾನ್ಯ ಸದಸ್ಯರು ಶಿವಮೊಗ್ಗದ ಪ್ರಶ್ನೆಯನ್ನು ಕೇಳುತ್ತಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ : ಶಿವಮೊಗ್ಗದಲ್ಲಿಯೇ ಆಗಲಿ ಒಳ್ಳೆಯ ತಾಳೆ ಬೀಜ ಇದೆಯಲ್ಲ ಆ ಜೀಜಗಳನ್ನು ತರಿಸಿ ಮಾಡಬೇಕಾದ ಕ್ರಮ ಹೊಸದಾಗಿರುತ್ತದೆ. ಆದುದರಿಂದ ಇದನ್ನೆಲ್ಲಾ ಆಲೋಚನೆ ಮಾಡಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳ ಸಂಖ್ಯೆ

396 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಹಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಸಂಖ್ಯೆ?

ಆ) ಅವುಗಳಲ್ಲಿ ರಾಜ್ಯ ಸಹಕಾರ ಬ್ಯಾಂಕಿನಿಂದ ಸಾಲ ಪಡೆದವುಗಳ ಸಂಖ್ಯೆ?

ಇ) ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ರಾಜ್ಯ ಸಹಕಾರ ಬ್ಯಾಂಕಿನಿಂದ ಸಾಲ ಪಡೆಯಲು ಅರ್ಹವಿಲ್ಲದಿರುವುದರ ಪ್ರಯುಕ್ತ ರೈತರು ತುಂಬಾ ತೊಂದರೆಗೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಆಪೆಕ್ಸ್ ಬ್ಯಾಂಕನಿಂದ ಸಾಲ ಪಡೆಯಲು ಅನರ್ಹವಾದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಯಾವುವು?

ಉ) ಸರ್ಕಾರ ರೈತರಿಗೆ ಸಾಲ ಒದಗಿಸಲು ಮಾಡಿರುವ ವ್ಯವಸ್ಥೆ?

ಊ) ಪುನರ್ಧನ ಪಡೆಯಲು ಅನರ್ಹವಿದ್ದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಬಗ್ಗೆ ವಿಶೇಷ ಪ್ರಕರಣಗಳಿಂದು ಸಾಲ ನೀಡಲು ಸರ್ಕಾರ ನಬಾರ್ಡ್‌ನೊಡನೆ ಸಮಾಲೋಚಿಸಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) 19.

ಆ) 19.

ಇ) ಇಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ. ಯಾಕೆಂದರೆ ರಾಜ್ಯದಲ್ಲಿ ಯಾವುದೇ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು ಆಪೆಕ್ಸ್ ಬ್ಯಾಂಕನಿಂದ ಸಾಲ ಪಡೆಯಲು ಅನರ್ಹವಾಗಿರುವುದಿಲ್ಲ. ಆದಾಗ್ಯೂ 4 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಾದ ಹಾಸನ, ಮಂಡ್ಯ, ಚಿತ್ರದುರ್ಗ ಮತ್ತು ಶಿವಮೊಗ್ಗ ಇವು ನಬಾರ್ಡ್‌ನಿಂದ ಪತ್ತು ಮಿತಿಯನ್ನು ಪಡೆಯಲು ಅನರ್ಹವಾಗಿರುತ್ತವೆ.